



'ಸ್ಲೋ ಅಂಡ್ ಸ್ಟಡೀ ವಿನ್ಸ್ ದಿ ರೇಸ್' ಅಂತ ಇದೆಯಲ್ಲ.. ಅದನ್ನೇ ನಾನು ಮುದುಕರು ಮತ್ತು ಹುಡುಗರನ್ನು ಇಟ್ಟುಕೊಂಡು ಸಿನಿಮಾ ಮಾಡಿದ್ದೀನಿ. ಹುಡುಗರು ಮೊಲಗಳ ತರಹ. ಇದನ್ನು ಗ್ಲೋಬಲ್ ಕಂಟೆಂಟ್‌ನಲ್ಲಿ ಇಟ್ಟು ನೋಡಿದಾಗ ಹೊಸ ಹೊಳಹುಗಳು ಸಿಗುತ್ತವೆ. ನನ್ನ ಈ ಸಲದ ಸಿನಿಮಾದ ಸೈಟ್, ಕಟ್ಟಡ, ನಕ್ಷೆ ಎಲ್ಲವೂ ಬದಲಾಗಿದೆ. ಇಂತಹ ಕಟ್ಟಡ ನಿಮಗೆ ಬೇರೆಲ್ಲೂ ಸಿಗಲ್ಲ. ಇದು ಹಿಂದಿನ ಸಿನಿಮಾಗಳಂತೆ ಇಲ್ಲ.

★ ಕನ್ನಡದ ಬೇರೆಯವರ ಸಿನಿಮಾಗಳನ್ನು ನೋಡುತ್ತಿದ್ದೀರಾ? ನಮ್ಮ ಉದ್ಯಮದಲ್ಲಿ ಏನು ನಡೀತಿದೆ?

ನಾನು ಇತ್ತೀಚೆಗೆ ನೋಡಿದ ಸಿನಿಮಾ ಅಂದರೆ ತಿಥಿ. ಏನು..? ಬಹಳ ಹಳೇದು ಅಂದ್ರಾ? ಹಂಗಂಥ ನಿಮಗೆ ಅನ್ನುತ್ತೆ. ಯಾವುದೇ ಉದ್ಯಮ, ಸಿನಿಮಾ ಇರಬಹುದು, ಒಬ್ಬೊಬ್ಬರ ದೃಷ್ಟಿಕೋನ ಬೇರೆ ಇರುತ್ತೆ. ಕನ್ನಡದಲ್ಲಿ ಏನು ನಡೀಬೇಕು? ಒಬ್ಬ ಕಾರ್ಪೆಂಟರ್‌ಗೆ ಕೇಳಿದರೆ, ಅವನು ಟೇಬಲ್ ಕುರ್ಚಿ ಮಾಡಬೇಕು ಅಷ್ಟೆ. ಹೋಟೆಲ್‌ನವನನ್ನು ಕೇಳಿದರೆ, ಪತ್ರಕರ್ತನನ್ನು ಕೇಳಿದರೆ ಏನೂ ನಡೀತಿಲ್ಲ ಎನ್ನಲಾದೀತೆ? ಅದರ ಪಾಡಿಗೆ ಉದ್ಯಮ ಅದು ನಡೀತಿದೆ. ಮೊದಲಿನಿಂದಲೂ ಹೇಗಿರಬೇಕೋ ಹಾಗೆಯೇ ಇದೆ. ನನ್ನ ಪ್ರಕಾರ ತುಂಬ ಚೆನ್ನಾಗಿ ನಡೀತಿದೆ.

★ ಹಾಗಲ್ಲ, ಕನ್ನಡ ಚಿತ್ರೋದ್ಯಮ ಇದ್ದಲ್ಲೇ ಸುತ್ತು ಹೊಡೀತಿದೆ ಅನ್ನಿಸಲ್ವೆ? ಇಲ್ಲಿ ಇನ್ನಷ್ಟು ವಿಭಿನ್ನ ಸಿನಿಮಾಗಳು ಬರಬೇಕಿತ್ತು ಅನ್ನಿಸೋದಿಲ್ವಾ?

ಮಾಡಬೇಕು, ಮಾಡ್ತಾ ಇದಾರೆ. ಕೆಲವೊಮ್ಮೆ ಯಾವುದೋ ಸ್ಟುಪಿಡ್ ಸಿನಿಮಾ ಗೆದ್ದುಬಿಡುತ್ತೆ. ಆಗ ಒಳ್ಳೆಯ ಸಿನಿಮಾಗಳು ಬಂದಿರಲ್ಲ. 2—3 ತಿಂಗಳು ಯಾವುದೂ ಒಳ್ಳೆಯ ಸಿನಿಮಾಗಳು ಬರದಿದ್ದಾಗ ಕೆಟ್ಟ ಸಿನಿಮಾಗಳು ಗೆದ್ದುಬಿಡುತ್ತವೆ. ಎಲ್ಲವೂ ಪಾರ್ಟ್ ಆಫ್ ದಿ ಗೇಮ್. ಸಿನಿಮಾ ರಿಲೀಸ್‌ಗೆ ಒಳ್ಳೆಯ ಟೈಮ್ ಸಿಗಬೇಕು. ಕನ್ನಡದಲ್ಲಿ ಹೊಸಬರೆಲ್ಲ ತುಂಬ ಒಳ್ಳೆಯ ಸಿನಿಮಾ ಮಾಡಬಲ್ಲರು. ಆದರೆ ರಿಲೀಸ್ ಆಗುವ ಟೈಮಿಗೆ ಅದು ಕೈಕಚ್ಚಬಹುದು. ಅದು ಮಾರ್ಕೆಟ್ ಗುಣ. ನನಗೂ ಈ ಗುಣ ಹೇಗೆ ಕೆಲಸ ಮಾಡ್ತದೆ ಅಂತ ಇದುವರೆಗೆ ಅರ್ಥ ಆಗಿಲ್ಲ. ಜನರಿಗೆ ಸಿನಿಮಾ ತಲುಪಿಸೋದು ಹೇಗೆ? ನೀವು ಕಥೆ ಬರೆದರೆ, ಅದನ್ನು ಪುಸ್ತಕ ರೂಪದಲ್ಲಿ ಪ್ರಿಂಟ್ ಮಾಡಿದರೆ ಸಾಲಲ್ಲ, ಅದನ್ನು ಜನ ಓದುವ ಹಾಗೆ ಮಾಡಬೇಕಲ್ಲ.. ಹಾಗೆ ಸಿನಿಮಾದಲ್ಲೂ ಕೆಲವು ಪ್ರತಿಭಾವಂತರು ಗಮನಕ್ಕೆ ಬಂದಿರಲ್ಲ. ಕೆಲವು ಸಮಯ ಸಾಕಷ್ಟು ಫಲಭರಿತ ಅನ್ನಿಸುತ್ತದೆ, ಕೆಲವೊಮ್ಮೆ ಉದ್ಯಮದಲ್ಲಿ ಏನೂ ನಡೀತಿಲ್ಲ ಅನ್ನುತ್ತೆ.

★ ಬೇರೆ ಭಾಷೆಯ ಸಿನಿಮಾಗಳಲ್ಲಿ, ಮುಖ್ಯವಾಗಿ ಹಿಂದಿಯಲ್ಲಿ ಒಂದಕ್ಕಿಂತ ಒಂದು ವಿಭಿನ್ನ ಸಿನಿಮಾಗಳು ಬರುತ್ತಿವೆ. ನಿರ್ಮಾಪಕರು ರಿಸ್ಕ್ ತಗೋತಾರೆ..

ದಕ್ಷಿಣದಲ್ಲಿ ಕಷ್ಟ ಸಾರ್. ಹಿಂದಿಯವರಿಗೆ ಗ್ಲೋಬಲ್ ಮಾರ್ಕೆಟ್ ಇದೆ. ಎಂಟೂವರೆ ಸಾವಿರ ಸೆಂಟರ್‌ಗಳಿವೆ. 22 ರಾಜ್ಯಗಳು. ಆ ಮಾರ್ಕೆಟ್‌ಗೆ ಸಿನಿಮಾ ಮಾಡುವುದಕ್ಕೂ, ಬರೀ 22 ಲಕ್ಷ ಜನರಿಗೆ ಸಿನಿಮಾ ಮಾಡೋದಕ್ಕೂ ವ್ಯತ್ಯಾಸವಿದೆ. ಇಲ್ಲಿ ಕೆಲವು ಅವಶ್ಯಕತೆಗಳು ಬೇರೆ ಇರ್ತವೆ. ಆಮೇಲೆ ಗ್ಲೋಬಲ್ ರೀಚ್ ಇದ್ದಾಗ ಕಥೆ ಹೇಳುವ ವಿಧಾನವೇ ಬೇರೆ ಆಗುತ್ತದೆ. ಇಲ್ಲಿ ಸಣ್ಣ ಸಣ್ಣ ಪ್ರಯೋಗಗಳಲ್ಲೂ ರಿಸ್ಕ್ ಇರುತ್ತದೆ. ನನಗೆ 'ಒಂದು ಮೊಟ್ಟೆಯ ಕಥೆ' ನೆನಪಾಗ್ತಿದೆ. ಜನ ತಮಗೆ ಬೇಕಾದ್ದನ್ನು ನೋಡ್ತಾರೆ. ಎಲ್ಲರಿಗೂ ಒಂದೇ ವಿಷಯ ಬೇಕಾಗಿರೋದಿಲ್ಲ. ಪ್ರೇಕ್ಷಕರನ್ನು ಏನೋ ಮಾಡಿ ಯಾಮಾರಿಸೋಕಾಗಲ್ಲ. 'ಒಂದು ಮೊಟ್ಟೆಯ ಕಥೆ' ಬ್ರಿಲಿಯಂಟ್ ಎಕ್ಸ್‌ಪರಿಮೆಂಟ್. ತುಂಬ ಅದ್ಭುತ ರಿಸಲ್ಟ್ ಬಂತು. ಅದೇ ಒಬ್ಬ ದೊಡ್ಡ ಸ್ಟಾರ್ ಚಿತ್ರಕ್ಕೆ ತುಂಬ ಇನ್‌ವೆಸ್ಟ್‌ಮೆಂಟ್ ಇರುತ್ತದೆ,– ಆದರೆ ಅಲ್ಲಿ ಕಥೆ ಹೇಗಿದೆ ಅನ್ನೋದು ಲೆಕ್ಕಕ್ಕೇ ಬರಲ್ಲ. ಉತ್ತರದವರಿಗೆ ನಮ್ಮನ್ನು ಹೋಲಿಸಲು ಆಗಲ್ಲ. ಅವರದ್ದು ದೊಡ್ಡ ಡ್ರಮ್. ಸಿಕ್ಕಾಪಟ್ಟೆ ದುಡ್ಡು ಸುರೀತಾರೆ. ಇತ್ತೀಚೆಗೆ ತಮಿಳು, ತೆಲುಗು, ಮಲಯಾಳಂ ನಲ್ಲಿ ಅಂತಹ ಪ್ರಯೋಗಗಳು ಆಗಿವೆ. ನಮ್ಮವರೂ ಬದಲಾಗಲೇಬೇಕು. ಈಗ ಸುಮಾರು ಜನ ಹೊಸಬರು ಬಂದಿದ್ದಾರೆ. ತುಂಬ ಒಳ್ಳೆಯ ಸಿನಿಮಾಗಳು ಇತ್ತೀಚೆಗೆ ಬಂದಿವೆ. ಸಿನಿಮಾ ಅನ್ನುವುದು ಖಂಡಿತಾ ನಿಂತ ನೀರು ಆಗುವುದಿಲ್ಲ. ಹೊಸಬರು ಬರ್ತಿದಾರೆ, ನಮ್ಮ ಪಂಚತಂತ್ರ ನಿರ್ಮಾಪಕರ ಹಾಗೆ. ಲೂಸಿಯಾ ಮಾಡಿದ ನಿರ್ಮಾಪಕರಿಗಿಂತ ಬೇರೆ ಉದಾಹರಣೆ ಬೇಕೆ?

★ ಟಿವಿ ರಿಯಾಲಿಟಿ ಷೋಗಳಲ್ಲಿ ಕಾಣಿಸಿಕೊಂಡಿದ್ದೀರಿ / ನಿಮ್ಮ ಅನುಭವ ಏನು?

ಅದ್ಭುತ ಅನುಭವ. ಅಲ್ಲಿ ಮೂರು, ಮೂರೂವರೆ ಸಾವಿರ ಪ್ರತಿಭೆಗಳನ್ನು ಸೇರಿಸಿ ಆಯ್ಕೆ ಮಾಡ್ತಾರೆ. ಬಹಳ ದೊಡ್ಡ ಕೆಲಸವದು. ನಾನೂ ಹೋಗಿದ್ದೆ. ನನಗೆ ಹೊಸಬರ ಜತೆ ಕೆಲಸ ಮಾಡುವುದೆಂದರೆ ಇಷ್ಟ. ತುಂಬ ಜನ ಹೊಸ ಬರಹಗಾರರು, ನಟರು ಇದ್ದಾರೆ. ತುಂಬ ಅದ್ಭುತವಾಗಿಯೂ ಇದೆ, ಕೆಲವೊಮ್ಮೆ ತೀರಾ ತಲೆ ಕೆಡೋ ತರಹದ್ದೂ ಮಾಡ್ತಾರೆ. ಒಟ್ಟಾರೆ ಟಿ.ವಿ.ಯಲ್ಲಿ ಏನೇನೋ ನಡೀತಿದೆ.

★ ನೀವೂ ಟಿ.ವಿ ಷೋ, ಸೀರಿಯಲ್ ಮಾಡೋ ಆಲೋಚನೆ ಇದೆಯಾ? ಅಲ್ಲಿ ಸಿನಿಮಾಗಿಂತ ೨–೩ ಪಟ್ಟು ಹೆಚ್ಚು ಹಣ ಇದೆಯಲ್ಲ?

ಟಿ.ವಿ. ಸಿನಿಮಾವನ್ನು ದಾಟಿ ಹೋಗಿ ಯಾವುದೋ ಕಾಲ ಆಯಿತು. ನಮ್ಮ ದೇಶದಲ್ಲಿ ಸಿನಿಮಾ ನೋಡೋರು ಮೂರೂವರೆ ಕೋಟಿಯಿಂದ ನಾಲ್ಕು ಕೋಟಿ ಜನರು ಮಾತ್ರ. 35ರಿಂದ 45 ಕೋಟಿ ಜನ ಟಿ.ವಿ ನೋಡ್ತಾರೆ. ಮನೆ ಮನೆಗೆ ಬರುತ್ತೆ, ಜನರನ್ನು ರಿಲ್ಯಾಕ್ಸ್ ಮಾಡುತ್ತೆ. ಈಗ ಸಿನಿಮಾಗಳಿಗೂ ದೊಡ್ಡ ಪ್ರಚಾರ ಸಿಗುವುದು ಟಿ.ವಿ ಷೋಗಳಿಂದ. ಟಿ.ವಿ, ಮೊಬೈಲ್ ಬಂದ ಬಳಿಕ ಮನರಂಜನೆಯನ್ನು ನೋಡುವ ವಿಧಾನ ಬದಲಾಗಿದೆ. ಈ ಕ್ಷೇತ್ರದಲ್ಲಿ ಹೂಡಿಕೆಯಾಗುವ ದುಡ್ಡು ಸಿನಿಮಾಗಿಂತ 15 ಪಟ್ಟು ಜಾಸ್ತಿ ಆಗಿದೆ. ಸಿನಿಮಾದವರಿಗೆ ಏನೂ ದುಡಿಮೆ ಇಲ್ಲ ಎನ್ನುವಷ್ಟರ ಮಟ್ಟಿಗೆ ಟಿ.ವಿ, ಇಂಟರ್‌ನೆಟ್ ಬೆಳೆದಿದೆ.

★ ನಮ್ಮಲ್ಲಿ ವೆಬ್ ಸೀರೀಸ್ ಮಾಡೋರು ಬರ್ತಾ ಇದ್ದಾರಾ?

ದಕ್ಷಿಣದಲ್ಲಿ ಕಡಿಮೆ. ಈಗೀಗ ಬರ್ತಾ ಇದ್ದಾರೆ. ನನಗೆ ಉತ್ತರದಲ್ಲಿ, ಹಿಂದಿಯಲ್ಲಿ ವೆಬ್ ಸೀರೀಸ್ ಮಾಡಿಕೊಡಿ ಅಂತ ಕೇಳ್ಕೊಂಡು ಬಂದಿದ್ರು. ಪ್ಲಾನ್ ಮಾಡಬೇಕು. ಹತ್ತು ಎಪಿಸೋಡ್‌ನಲ್ಲಿ ಅಲ್ಲಿ ಎರಡೇ ಎಪಿಸೋಡ್ ಕೊಡೋದು. ಹತ್ತೂ ಒಬ್ಬನ ಕೈಯಲ್ಲಿ ಆಗಲ್ಲ ಅಂತಾರೆ. ಕಾದಂಬರಿ ಸಜೆಸ್ಟ್ ಮಾಡಿ ಅಂದಿದಾರೆ.

★ ಕನ್ನಡದಲ್ಲಿ ಮುಂದೆ?

ಶಿವರಾಜ್ ಕುಮಾರ್ ಸಿನಿಮಾ ಮಾಡಬೇಕಿದೆ. ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ಚಿತ್ರಕಥೆ ಬರೀತಾ ಇದೀನಿ. ಶಿವರಾಜ್ ಕುಮಾರ್ ಅವರ ಈವರೆಗಿನ ಟ್ರ್ಯಾಕ್ ಬಿಟ್ಟು ಬೇರೆ ತರಹದ್ದೇ ಮಾಡಬೇಕು ಅಂತಿದ್ದೀನಿ. ತುಂಬ ಹಳೇ ಕಥೆ. ಬಹಳ ಸಮಯದಿಂದ ಮಾಡ್ಬೇಕು ಅಂದ್ಕೊಂಡಿದ್ದೆ.

★ ಬೇರೆ ಏನಾದರೂ...ಕಥೆ, ಕಾದಂಬರಿ ಬರೆಯೋ ಆಲೋಚನೆ ಇದೆಯಾ?

ಸಿನಿಮಾ ಬಿಟ್ಟು ಬೇರೆ ಯಾವುದೂ ನನಗೆ ಬರಲ್ಲ ಕಣ್ರೀ. ಹ್ಹ ಹ್ಹ... ಕೆಲವು ಪದ್ಯ, ಲೇಖನಗಳನ್ನು ಬರೆಯುವುದಿದೆ. ಅಷ್ಟೆ. ಓದೋದು ತುಂಬ ಇದೆ. ಇತ್ತೀಚೆಗೆ ಹಾಲಿವುಡ್ ದಂತಕಥೆಗಳ ಬಗ್ಗೆ ಒಂದು ಪುಸ್ತಕ ಓದಿದೆ. ಮರ್ಲಿನ್ ಮನ್ರೋ ಆತ್ಮಕಥೆ ಓದಿದೆ. ಈಗ ಮಾಡೋದನ್ನೇ ಇನ್ನಷ್ಟು ಚೆನ್ನಾಗಿ ಮಾಡಿದರೆ ಸಾಕು.